**ಸಾಕ್ಷಿಗೆ ದಿನಾಂಕಃ 15.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ Smt.NP ರವರಿಂದಃ**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, **ಪೋಲಿಸರಿಗೆ ನೀಡಿರುವ ದೂರನ್ನು ನಿ.ಪಿ.2** ಎಂದು, ಮತ್ತೊಂದು ದೂರನ್ನು ನಿ.ಪಿ.**3** ಎಂದು ಗುರುತಿಸಿದೆ.

3) ವಾಹನ ತಪಾಸಣಾ ವರದಿಯನ್ನು ನಿ.ಪಿ.**4** ಎಂದು, ನಷ್ಟ ಭರ್ತಿ ಪತ್ರವನ್ನು ನಿ.ಪಿ.**5** ಎಂದು, ಮತ್ತು ಅಂತಿಮ ವರದಿಯನ್ನು ನಿ.ಪಿ.**6** ಎಂದು ಗುರುತಿಸಿದೆ.

4) ಗಾಯದ ಪ್ರಮಾಣ ಪತ್ರವನ್ನು ನಿ.ಪಿ.**7** ಎಂದು ಗುರುತಿಸಿದೆ.

**ಸೂಚನೆಃ** ನಿ.ಪಿ.1 ರಿಂದ ನಿ.ಪಿ.7 ಎಂದು ಗುರುತು ಆಗಿರುವ ದಾಖಲೆಗಳು ಮಧುಗಿರಿ ಪೋಲಿಸ್ ಠಾಣೆಯವರು ನೀಡಿರುವಂತಹ ಯಥಾ ನಕಲುಗಳು ಆಗಿವೆ.

5) **ಡಿಸ್ಚಾರ್ಜ್ ಸಮ್ಮರಿ ಅನ್ನು** ನಿ.ಪಿ.**8** ಎಂದು ಗುರುತಿಸಿದೆ.

6) ಒಟ್ಟು **11** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**9** ಎಂದು ಗುರುತಿಸಿದೆ.

7) ಆದ ಕಾರಣದಿಂದ ಪ್ರಾರ್ಥನೆಯಂತೆ ನನಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು: ಎದುರುದಾರರ ಪರ ವಕೀಲರಿಂದಃ**

1 ಮತ್ತು 2 ನೇ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ ಮತ್ತು ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ. 3 ನೇ ಎದುರುದಾರರು ಏಕ ಪಕ್ಷೀಯ ಆಗಿದ್ದಾರೆ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.